SL. No. : L

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 19. 06. 2017 ] [ Date : 19. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ. ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. **A ಪಟ್ಟಿ**ಯಲ್ಲಿ ನಾಯಕರು ಮತ್ತು **B ಪಟ್ಟಿ**ಯಲ್ಲಿ ಅವರು ಅಲಂಕರಿಸಿದ್ದ ಹುದ್ದೆಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಜವಾಹರಲಾಲ್ ನೆಹರೂ | (i) ಪ್ರಥಮ ರಾಷ್ಟ್ರಾಧ್ಯಕ್ಷರು |
| (b) ಡಾ. ರಾಜೇಂದ್ರಪ್ರಸಾದ್ | (ii) ಪ್ರಥಮ ಗೃಹಮಂತ್ರಿ |
| (c) ಸರ್ದಾರ್ ವಲ್ಲಭಭಾಯಿ ಪಟೇಲ್ | (iii) ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು |
| (d) ನ್ಯಾಯಮೂರ್ತಿ ಫಜಲ್ ಆಲಿ | (iv) ಪ್ರಥಮ ಪ್ರಧಾನ ಮಂತ್ರಿ |

| | ***a*** | ***b*** | ***c*** | ***d*** |
|---|---|---|---|---|
| (A) | iii | iv | i | ii |
| (B) | iv | i | ii | iii |
| (C) | i | ii | iii | iv |
| (D) | ii | iii | iv | i |

2. ಈ ಕೆಳಗಿನವರಲ್ಲಿ 'ಶಾಂತಿ, ಆಹಾರ ಮತ್ತು ಭೂಮಿ' ಎಂಬ ಜನಪರ ಘೋಷಣೆಯನ್ನು ನೀಡಿದ ನಾಯಕ

   (A) ಜೋಸೆಫ್ ಸ್ಟಾಲಿನ್ (B) ಮುಸ್ಸೋಲಿನಿ

   (C) ಮಾವೋತ್ಸೆ–ತುಂಗ್ (D) ಲೆನಿನ್

3. 26/11 ರ ಮುಂಬೈನ ತಾಜ್ ಹೋಟೇಲ್ ಮೇಲಿನ ಭಯೋತ್ಪಾದಕ ದಾಳಿಯು ಈ ರಾಷ್ಟ್ರಗಳ ಸಂಬಂಧಕ್ಕೆ ಧಕ್ಕೆ ತಂದಿದೆ

   (A) ಭಾರತ–ನೇಪಾಳ (B) ಭಾರತ–ಮ್ಯೆಯನ್ಮಾರ್

   (C) ಭಾರತ–ಪಾಕಿಸ್ತಾನ (D) ಭಾರತ–ಶ್ರೀಲಂಕಾ

4. ಅಕ್ಟೋಬರ್, 24. 1945 ಒಂದು ವಿಶೇಷವಾದ ದಿನವಾಗಿದೆ. ಏಕೆಂದರೆ,

(A) ವಿಶ್ವಸಂಸ್ಥೆ (ಯು.ಎನ್.ಓ.) ಯ ಸ್ಥಾಪನೆಯಾಯಿತು

(B) ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಸ್ಥಾಪನೆಯಾಯಿತು

(C) ಯುರೋಪಿಯನ್ ಯೂನಿಯನ್ ರಚನೆಯಾಯಿತು

(D) ಸಾರ್ಕ್ ಪ್ರಾದೇಶಿಕ ಒಕ್ಕೂಟದ ರಚನೆಯಾಯಿತು

5. ದುಡಿಮೆಯಲ್ಲಿನ ಭೇದ–ಭಾವವನ್ನು ತೊಡೆದುಹಾಕಲು ಸರ್ಕಾರವು 1976 ರಲ್ಲಿ ಜಾರಿಗೆ ತಂದಿರುವ ಕಾಯಿದೆ

(A) ಉದ್ಯೋಗ ಖಾತರಿ ಕಾಯಿದೆ (B) ಅಸ್ಪೃಶ್ಯತಾ ನಿವಾರಣಾ ಕಾಯಿದೆ

(C) ಬಾಲಶ್ರಮ ನಿರ್ಮೂಲನ ಕಾಯಿದೆ (D) ಸಮಾನ ವೇತನ ಕಾಯಿದೆ

6. ಈ ನಕ್ಷೆಯಲ್ಲಿ ಗುರುತಿಸಿರುವ ನದಿಕಣಿವೆ ಯೋಜನೆಗಳನ್ನು ಸರಿಯಾಗಿ ಹೋಲಿಕೆಯಾಗುವುದು :




(A) 1 — ಕೋಸಿ, 2 — ನರ್ಮದಾ, 3 — ಹಿರಾಕುಡ್

(B) 1 — ನಾಗಾರ್ಜುನ ಸಾಗರ, 2 — ನರ್ಮದಾ, 3 — ಕೋಸಿ

(C) 1 — ನರ್ಮದಾ, 2 — ಕೋಸಿ, 3 — ನಾಗಾರ್ಜುನ ಸಾಗರ

(D) 1 — ಕೋಸಿ, 2 — ನಾಗಾರ್ಜುನ ಸಾಗರ, 3 — ನರ್ಮದಾ

7. 'ಸುವರ್ಣ ಕ್ರಾಂತಿ' ಎಂಬುದು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಸೂಚಿಸುತ್ತದೆ

(A) ಚಿನ್ನದ ಗಣಿಗಾರಿಕೆ (B) ತೋಟಗಾರಿಕೆ

(C) ಹೈನುಗಾರಿಕೆ (D) ಮೀನುಗಾರಿಕೆ

8. 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಎಂಬ ಪುಸ್ತಕವನ್ನು ಬರೆದವರು

(A) ಸರ್ ಎಂ. ವಿಶ್ವೇಶ್ವರಯ್ಯ (B) ಡಾ|| ಎಂ.ಎಸ್. ಸ್ವಾಮಿನಾಥನ್

(C) ಡಾ|| ವರ್ಗೀಸ್ ಕುರಿಯನ್ (D) ಡಾ|| ನಾರ್ಮನ್ ಬೋರ್ಲಾಗ್

9. ನಿಗದಿತ ಅವಧಿಗೆ ಮುಂಚೆ ಠೇವಣಿ ಹಣವನ್ನು ಹಿಂದಕ್ಕೆ ಪಡೆಯಲು ಸಾಧ್ಯವಾಗದ ಬ್ಯಾಂಕ್ ಖಾತೆಯ ವಿಧ

(A) ಉಳಿತಾಯ ಖಾತೆ (B) ಚಾಲ್ತಿ ಖಾತೆ

(C) ಆವರ್ತ ಠೇವಣಿ ಖಾತೆ (D) ನಿಶ್ಚಿತ ಠೇವಣಿ ಖಾತೆ

10. ಶ್ರೀ ಪ್ರತಾಪ್ ರೆಡ್ಡಿಯವರು ಈ ಕೆಳಗಿನ ಸಂಸ್ಥೆಗೆ ಸಂಬಂಧಿಸಿದ್ದಾರೆ

(A) ಅಪೋಲೋ ಆಸ್ಪತ್ರೆ ಸಮೂಹ (B) ರಿಲಯನ್ಸ್ ಸಂಸ್ಥೆ

(C) ವಿಪ್ರೋ ತಂತ್ರಜ್ಞಾನ ಸಂಸ್ಥೆ (D) ಬಯೋಕಾನ್ ನಿಗಮ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

11. ಕಾಲಚಕ್ರ ಎಂದರೇನು ?

12. 1909 ರ ಮಿಂಟೋ–ಮಾರ್ಲೆ ಸುಧಾರಣೆಗಳು ಭಾರತದ ವಿಭಜನೆಗೆ ನಾಂದಿಯಾದವು. ಹೇಗೆ ?

13. ಭಾರತದ ಒಂದು ಭಾಗವನ್ನು ಸುದೀರ್ಘ ಕಾಲ ಆಳಿದ ಯುರೋಪಿಯನ್ ರಾಷ್ಟ್ರ ಯಾವುದು ?

14. ಕರ್ನಾಟಕ ಸರ್ಕಾರವು ಡಾ|| ಡಿ.ಎಂ. ನಂಜುಂಡಪ್ಪ ಸಮಿತಿಯನ್ನು ಏಕೆ ರಚಿಸಿದೆ ?

15. ವಿಶ್ವಸಂಸ್ಥೆಯ ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಕಡಿಮೆಯಾಗಿದೆ. ಏಕೆ ?

16. ನಮ್ಮ ಸಂವಿಧಾನದ 24ನೇಯ ವಿಧಿಯು ಏನೆಂದು ಘೋಷಿಸುತ್ತದೆ ?

17. ಭಾರತ ಸರ್ಕಾರವು 'ಪ್ರಸವ–ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ'ಯನ್ನು ಜಾರಿಗೆ ತಂದಿದೆ. ಏಕೆ ?

18. ದಕ್ಷಿಣ ಭಾರತದ ಅತ್ಯಂತ ಎತ್ತರವಾದ ಪರ್ವತ ಶಿಖರ ಯಾವುದು ?

19. ಭಾರತದಲ್ಲಿ ಸ್ಥಳಾಂತರ ಬೇಸಾಯವು ಕಡಿಮೆಯಾಗಿದೆ. ಏಕೆ ?

20. ಪೆಟ್ರೋಲಿಯಂನ್ನು 'ದ್ರವರೂಪದ ಚಿನ್ನ' ಎಂದು ಏಕೆ ಕರೆಯುತ್ತಾರೆ ?

21. ಭಾರತದ 'ಸಿಲಿಕಾನ್ ಸಿಟಿ' ಯಾವುದು ?

22. 'ಸುಗ್ಗಿ ನಂತರದ ತಂತ್ರಜ್ಞಾನ' ಎಂದರೇನು ?

23. ಭಾರತದ ಹಣಕಾಸು ವರ್ಷದ ಅವಧಿ ಯಾವುದು ?

24. ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿರುವ ಪ್ರಮುಖ ಉದ್ದೇಶವೇನು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಪ್ಲಾಸಿ ಕದನದ ಪರಿಣಾಮಗಳೇನು ?

26. ಶ್ರೀರಂಗಪಟ್ಟಣ ಒಪ್ಪಂದದ ಶರತ್ತುಗಳಾವುವು ?

27. ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗೆ ರಾಜಾ ರಾಮ್‌ಮೋಹನ ರಾಯ್‌ರ ಕೊಡುಗೆಗಳೇನು ?

*ಅಥವಾ*

ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳಾವುವು ?

28. ನಾಜಿ ಸಿದ್ಧಾಂತವು ಜರ್ಮನಿಯನ್ನು ಹೇಗೆ ಹಾಳು ಮಾಡಿತು ?

29. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ?

30. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳೇನು ?

31. ದೊಂಬಿಯ ಸ್ವರೂಪವನ್ನು ವಿವರಿಸಿ.

32. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ.' ಸಮರ್ಥಿಸಿ.

33. ಮಣ್ಣಿನ ಸವೆತದಿಂದಾಗುವ ಪರಿಣಾಮಗಳಾವುವು ?

34. ಅರಣ್ಯವನ್ನು ಹೇಗೆ ಸಂರಕ್ಷಿಸಬಹುದು ?

35. ನೈಸರ್ಗಿಕ ಪ್ರಕೋಪಗಳನ್ನು ಎದುರಿಸಲು ದೂರ ಸಂವೇದಿ ತಂತ್ರಜ್ಞಾನವು ಹೇಗೆ ಸಹಾಯಕವಾಗಿದೆ ?

36. ಕಡಲ್ಕೊರೆತವನ್ನು ಹೇಗೆ ತಡೆಗಟ್ಟಬಹುದು ?

37. ಜನರು ಗ್ರಾಮೀಣ ಪ್ರದೇಶಗಳಿಂದ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದರಿಂದ ಆಗುವ ಪರಿಣಾಮಗಳೇನು ?

38. ತಲಾದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ?

39. ಜಾಗತೀಕರಣದಿಂದ ಪರಿಸರ ಮಾಲಿನ್ಯವು ಹೆಚ್ಚುತ್ತಿದೆ. ಸಮರ್ಥಿಸಿ.

40. ಯುರೋಪಿಯನ್ನರು ಭಾರತಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯಲು ಕಾರಣಗಳೇನು ?

41. ಶೀತಲ ಸಮರದ ಸಂದರ್ಭದಲ್ಲಿ ರಚನೆಯಾದ ಎರಡು ಶಕ್ತಿಬಣಗಳನ್ನು ಹೆಸರಿಸಿ.

42. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು ?

43. ಭಾರತದಲ್ಲಿ ಸಾಕ್ಷರತೆಯನ್ನು ಪ್ರಸಾರ ಮಾಡಲು ಕೈಗೊಂಡಿರುವ ಕ್ರಮಗಳಾವುವು ?

44. ಭಾರತದಲ್ಲಿ ಪರಿಸರ ಸಂರಕ್ಷಣೆಗಾಗಿ ನಡೆದ ಸಾಮೂಹಿಕ ಪ್ರತಿಭಟನೆಗಳನ್ನು ಹೆಸರಿಸಿ.

45. ಭಾರತದ ನಾಲ್ಕು ಪ್ರಧಾನ ಭೂಸ್ವರೂಪಗಳು ಯಾವುವು ?

46. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

47. ಭಾರತದ ಪಶ್ಚಿಮ ಕರಾವಳಿಯಲ್ಲಿ ಕಂಡುಬರುವ ಪ್ರಮುಖ ಬಂದರುಗಳನ್ನು ಹೆಸರಿಸಿ.

48. ಸರ್ಕಾರವು ಆರಂಭಿಸಿರುವ ಎರಡು ವಸತಿ ಯೋಜನೆಗಳನ್ನು ಹೆಸರಿಸಿ.

49. 'ಬ್ಯಾಂಕು' ಎಂಬ ಪದವು ಹೇಗೆ ಬಂದಿದೆ ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. '1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ನಿರೀಕ್ಷಿತ ಯಶಸ್ಸನ್ನು ತರಲಿಲ್ಲ'. ಕಾರಣಗಳನ್ನು ನೀಡಿ.

***ಅಥವಾ***

'ಭಾರತೀಯ ಶಿಕ್ಷಣ ಕ್ಷೇತ್ರದ ಮೇಲೆ ಬ್ರಿಟಿಷ್ ಆಡಳಿತವು ಮಹತ್ತರ ಪರಿಣಾಮಗಳನ್ನು ಬೀರಿತು.' ಸಮರ್ಥಿಸಿ.

51. ಭಾರತದ ವಿದೇಶಾಂಗ ನೀತಿಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

***ಅಥವಾ***

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳೇನು ?

52. ಸರ್ಕಾರವು ಅಸ್ಪೃಶ್ಯತೆಯ ನಿವಾರಣೆಗೆ ಹೇಗೆ ಪ್ರಯತ್ನಿಸುತ್ತಿದೆ ?

***ಅಥವಾ***

ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳಾವುವು ?

53. ಭಾರತದಲ್ಲಿ ರಸ್ತೆ ಸಾರಿಗೆಯು ಎದುರಿಸುತ್ತಿರುವ ಸಮಸ್ಯೆಗಳೇನು ?

***ಅಥವಾ***

ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

54. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

***ಅಥವಾ***

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

55. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ನಮಗಾಗುವ ಲಾಭಗಳೇನು ?

***ಅಥವಾ***

ವಿಮಾ ಪಾಲಸಿಯನ್ನು ಪಡೆಯುವಾಗ ಯಾವ ವಿಧಾನಗಳನ್ನು ಅನುಸರಿಸಬೇಕು ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

56. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** $1 + 3 = 4$

a) $23\frac{1}{2}^{o}$ ಉ. ಅಕ್ಷಾಂಶ

b) ಉತ್ಕಲ ತೀರ

c) ತುಂಗಭದ್ರಾ ಯೋಜನೆ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಹಿಮಾಲಯ ಪರ್ವತದಿಂದಾಗುವ ಉಪಯೋಗಗಳು ಯಾವುವು ? 4